ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ5[5]ಸಗಟು ಖರೀದಿ:02/2008-09 ದಿನಾಂಕ:23.01.2009

# ಪತ್ರಿಕಾ ಪ್ರಕಟಣೆ

## 2008-09ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಆಯ್ಕೆ ಮಾಡುವ ಕುರಿತು

* * *

2008-09ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ, 400 ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಲೇಖಕರು/ಪ್ರಕಾಶಕರಿಂದ ಆಹ್ವಾನಿಸಲಾಗಿದೆ. ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ/ಶಿಕ್ಷಕರಿಗೆ ಉಪಯುಕ್ತವಾಗುವಂತಹ ಕನ್ನಡ ಭಾಷೆ, ವಿಜ್ಞಾನ, ಜೀವಶಾಸ್ತ್ರ, ರಸಾಯನ ಶಾಸ್ತ್ರ, ಭೌತಶಾಸ್ತ್ರ, ಗಣಿತಶಾಸ್ತ್ರ, ಸಮಾಜ ವಿಜ್ಞಾನ, ಇತಿಹಾಸ, ಭೂಗೋಳ, ಅರ್ಥಶಾಸ್ತ್ರ, ಸಮಾಜ ಶಾಸ್ತ್ರ, ಪೌರನೀತಿ, ನಿಘಂಟು, ವಿಶ್ವಕೋಶ, ಸಮಾನ ಪದಕೋಶ, ಉಕ್ತಿಗಳ ಸಂಕಲನ, ಪ್ರಬಂಧ, ಕಾವ್ಯ, ಕಥನ ಸಾಹಿತ್ಯ, ನಾಟಕ, ಕಾದಂಬರಿ, ವ್ಯಾಕರಣ, ಸಾಮಾನ್ಯ ಜ್ಞಾನ, ಕ್ರೀಡೆ, ವೃತ್ತಿ ಶಿಕ್ಷಣ, ವೃತ್ತಿ ಕಾರ್ಯಗಳ ಮಾಹಿತಿ ಕುರಿತ ಪುಸ್ತಕಗಳು, ಮಹಾನ್ ಸಾಧಕರ ಜೀವನ ಚರಿತ್ರೆಗಳು, ಆರೋಗ್ಯ ಶಿಕ್ಷಣ, ವಿಜ್ಞಾನದ ಆಕರ ಗ್ರಂಥಗಳು, ಪ್ರಶಸ್ತಿ ಪಡೆದ ಕೃತಿಗಳು, ಕನ್ನಡಕ್ಕೆ ಭಾಷಾಂತರಿಸಿದ ಪ್ರಶಸ್ತಿ ಪಡೆದ ಕೃತಿಗಳು, ಮಾಹಿತಿ ತಂತ್ರಜ್ಞಾನ, ಕಲೆ ಮತ್ತು ಸಾಹಿತ್ಯ, ಸಾಮಾನ್ಯ ಹಾಗೂ ಪರಾಮರ್ಶನ ಕೃತಿಗಳು, ಜನಪ್ರಿಯ ವಿಜ್ಞಾನ, ಪರಿಸರ ಅಧ್ಯಯನ ಸೇರಿದಂತೆ ಕನ್ನಡ, ಇಂಗ್ಲಿಷ್, ಹಿಂದೀ ಭಾಷೆಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಖರೀದಿಸಲು ಯೋಜನೆ ರೂಪಿಸಲಾಗಿದೆ.

ಲೇಖಕರು ಮತ್ತು ಪ್ರಕಾಶಕರು ಅರ್ಜಿ ನಮೂನೆಯನ್ನು ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು, ಅಪರ ಆಯುಕ್ತರ ಕಛೇರಿ, ಸಾರ್ವಜನಿಕ ಶಿಕ್ಷಣ ಇಲಾಖೆ, ಧಾರವಾಡ ಮತ್ತು ಗುಲ್ಬರ್ಗಾ, ಕಾರ್ಯದರ್ಶಿಗಳು ಹಾಗೂ ಪದನಿಮಿತ್ತ ಸಹ ನಿರ್ದೇಶಕರ ಕಛೇರಿಗಳು, ಮೈಸೂರು, ಗುಲ್ಬರ್ಗಾ ಮತ್ತು ಬೆಳಗಾಂ ವಿಭಾಗಗಳು ಮತ್ತು ಎಲ್ಲಾ ಜಿಲ್ಲಾ ಉಪ ನಿರ್ದೇಶಕರ ಕಛೇರಿಗಳಿಂದ ಪಡೆಯಬಹುದಾಗಿದೆ.

ಅರ್ಜಿಯೊಂದಿಗೆ ಪುಸ್ತಕದ ಒಂದು ಪ್ರತಿಯನ್ನು ಸಲ್ಲಿಸಬೇಕು. ಪುಸ್ತಕದ ಮೇಲೆ ದರವನ್ನು ಸ್ಪಷ್ಟವಾಗಿ ಮುದ್ರಿಸಿರಬೇಕು. ಸ್ಟಿಕ್ಕರ್ ಅಂಟಿಸಿದ, ತಿದ್ದಿದ ಮುಂತಾದ ದರಗಳನ್ನು ಪರಿಗಣಿಸಲಾಗುವುದಿಲ್ಲ. ಆಯ್ಕೆಗೆ ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

- ಖರೀದಿಸಲಾಗುವ ಪ್ರತಿಯೊಂದು ಪುಸ್ತಕಕ್ಕೆ ನಿಯಮಾನುಸಾರ ಶೇಕಡ 15 ರಷ್ಟು ಸೋಡಿಯನ್ನು ಕಡ್ಡಾಯವಾಗಿ ನೀಡಬೇಕಾಗಿರುತ್ತದೆ.
- ಪುಸ್ತಕಗಳನ್ನು***ದಿನಾಂಕ:07.02.2009ರ ಸಂಜೆ 5-30 ಗಂಟೆಯೊಳಗೆ ಜಂಟಿ ನಿರ್ದೇಶಕರು [ಆಡಳಿತ] ಮತ್ತು ಸದಸ್ಯ ಕಾರ್ಯದರ್ಶಿಗಳು, ಪುಸ್ತಕ ಆಯ್ಕೆ ಸಮಿತಿ, ರಾಜ್ಯ ಶಿಕ್ಷಣ ಸಂಪನ್ಮೂಲ ಕೇಂದ್ರ,[ಸೆರಿಕ್ ಗ್ರಂಥಾಲಯ, ಶೇಷಾದ್ರಿ ಪುರಂ[,ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] ಬೆಂಗಳೂರು-560020 [ದೂರವಾಣಿ ಸಂಖ್ಯೆ:23464102 ]*** ಇವರಿಗೆ ತಲುಪುವಂತೆ ಸಲ್ಲಿಸಬೇಕು.
- ನಂತರ ಸಲ್ಲಿಸಲಾಗುವ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.
- ಮಾರ್ಗಸೂಚಿ , ಅರ್ಜಿ ನಮೂನೆ ಇನ್ನಿತರೆ ಹೆಚ್ಚಿನ ವಿವರಗಳನ್ನು ಸಾರ್ವಜನಿಕ ಶಿಕ್ಷಣ ಇಲಾಖೆಯ **"ವೆಬ್ ಸೈಟ್‌ನಲ್ಲಿ"** ಪಡೆಯಬಹುದು.

**ವೆಬ್ ಸೈಟ್: http://schooleducation.kar.nic.in**

ಆಯುಕ್ತರು

ಸಾರ್ವಜನಿಕ ಶಿಕ್ಷ ಇಲಾಖೆ

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ5[5]ಸಗಟು ಖರೀದಿ:02:2008-09 ದಿನಾಂಕ:23.01.2009

# ಪುಸ್ತಕಗಳ ಆಯ್ಕೆ ಬಗ್ಗೆ ಮಾರ್ಗಸೂಚಿ

**ವಿಷಯ:** 2008-09ನೇ ಸಾಲಿನ ಸಗಟು ಖರೀದಿ ಯೋಜನೆಯಡಿ ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳ ಆಯ್ಕೆ ಮತ್ತು ಖರೀದಿ ಮಾಡುವ ಕುರಿತು.

**ಉಲ್ಲೇಖ:** ಸರ್ಕಾರದ ಆದೇಶ ಸಂಖ್ಯೆ:ಇಡಿ 78 ಯೋಯೋಕಾ 2008 ದಿ:04.04.2008
[ಇಡಿ:100 ಸ್ವೀಮರ(ಯುನಿಕ್)2008 ದಿ: 04.04.2008
2] ಸರ್ಕಾರದ ಆದೇಶ ಸಂಖ್ಯೆ:ಇಡಿ 184 ಎಂಸಿಡಿ 2008,ದಿನಾಂಕ:26.12.2008
[ಇಡಿ 196 ಸ್ವೀಮರ(ಯುನಿಕ್)2008,ದಿನಾಂಕ:29.12.2008]

***

2008-09ನೇ ಸಾಲಿನ ಪುಸ್ತಕ ಸಗಟು ಖರೀದಿ ಯೋಜನೆಯಡಿ, 2007-08ನೇ ಸಾಲಿನಲ್ಲಿ ಮಂಜೂರಾಗಿರುವ ಹೊಸ 400 ಸರ್ಕಾರಿ ಪ್ರೌಢ ಶಾಲೆಗಳ ಗ್ರಂಥಾಲಯಗಳಿಗೆ ಪುಸ್ತಕಗಳನ್ನು ಖರೀದಿಸಿ ಸರಬರಾಜಿಸುವ ಯೋಜನೆ ರೂಪಿಸಲಾಗಿದೆ.

ಈ ಯೋಜನೆಯಡಿ ಪ್ರೌಢ ಶಾಲಾ ಹಂತದಲ್ಲಿ ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಶೈಕ್ಷಣಿಕ ಚಟುವಟಿಕೆಗಳಿಗೆ ಪೂರಕವಾಗಿರುವಂತಹ ಕನ್ನಡ ಭಾಷೆ,ವಿಜ್ಞಾನ,ಜೀವ ಶಾಸ್ತ್ರ, ರಸಾಯನ ಶಾಸ್ತ್ರ,ಭೌತ ಶಾಸ್ತ್ರ,ಗಣಿತ ಶಾಸ್ತ್ರ, ಸಮಾಜ ವಿಜ್ಞಾನ,ಇತಿಹಾಸ,ಭೂಗೋಳ,ಅರ್ಥಶಾಸ್ತ್ರ,ಪೌರನೀತಿ,ನಿಘಂಟು,ವಿಶ್ವ ಕೋಶ,ಸಮಾನ ಪದ ಕೋಶ,ಉಕ್ತಿಗಳ ಸಂಕಲನ, ಪ್ರಬಂಧ,ಕಾವ್ಯ,ಕಥನ ಸಾಹಿತ್ಯ,ನಾಟಕ, ಕಾದಂಬರಿ, ವ್ಯಾಕರಣ, ಸಾಮಾನ್ಯ ಜ್ಞಾನ,ಕ್ರೀಡೆ,ವೃತ್ತಿ ಶಿಕ್ಷಣ,ವೃತ್ತಿ ಕಾರ್ಯಗಳ ಮಾಹಿತಿ ಕುರಿತ ಪುಸ್ತಕಗಳು,ಮಹಾನ್ ಸಾಧಕರ ಜೀವನ ಚರಿತ್ರೆಗಳು,ಆರೋಗ್ಯ ಶಿಕ್ಷಣ,ವಿಜ್ಞಾನದ ಆಕರ ಗ್ರಂಥಗಳು,ಪ್ರಶಸ್ತಿ ಪಡೆದ ಕೃತಿಗಳು,ಕನ್ನಡಕ್ಕೆ ಭಾಷಾಂತರಿಸಿದ ಪ್ರಶಸ್ತಿ ಪಡೆದ ಕೃತಿಗಳು,ಮಾಹಿತಿ ತಂತ್ರಜ್ಞಾನ,ಕಲೆ ಮತ್ತು ಸಾಹಿತ್ಯ,ಸಾಮಾನ್ಯ ಹಾಗೂ ಪರಾಮರ್ಶನ ಕೃತಿಗಳು,ಜನಪ್ರಿಯ ವಿಜ್ಞಾನ,ಪರಿಸರ ಅಧ್ಯಯನ ಸೇರಿದಂತೆ ಕನ್ನಡ,ಇಂಗ್ಲಿಷ್,ಹಿಂದೀ ಭಾಷೆಗಳಲ್ಲಿ ಪ್ರಕಟಗೊಂಡಿರುವ ಪುಸ್ತಕಗಳನ್ನು ಆಯ್ಕೆ ಮಾಡಲು ನಿರ್ಧರಿಸಿ,ಲೇಖಕರು ಮತ್ತು ಪ್ರಕಾಶಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

➢ ***ಸರ್ಕಾರಿ ಪ್ರೌಢ ಶಾಲಾ ಗ್ರಂಥಾಲಯಗಳಿಗೆ ಉಪಯುಕ್ತವಾದ ಪುಸ್ತಕಗಳನ್ನು ಕೆಳಕಂಡ ಮೂರು ವಿಭಾಗಗಳಾಗಿ ವರ್ಗೀಕರಿಸಲಾಗಿದೆ.***

### *01. ಶಿಕ್ಷಕರಿಗಾಗಿ:*

- ಈ ವಿಭಾಗದಲ್ಲಿ ರಾಜ್ಯ ಸರ್ಕಾರ 8 ರಿಂದ 10ನೇ ತರಗತಿಗೆ ನಿಗದಿಪಡಿಸಿರುವ ಪಠ್ಯವಸ್ತುವನ್ನು ಬೋಧಿಸಲು ಶಿಕ್ಷಕರಿಗೆ ಉಪಯುಕ್ತವಾದ ಪೂರಕ ಸಾಹಿತ್ಯ, ಶಿಕ್ಷಣ ಕ್ಷೇತ್ರದ ಸುಧಾರಣೆಯಲ್ಲಿ ರಾಷ್ಟ್ರ ಮತ್ತು ರಾಜ್ಯದಲ್ಲಿ ಕೈಗೊಳ್ಳಲಾಗಿರುವ ವಿನೂತನ ಯಶಸ್ವಿ ಪ್ರಯೋಗಗಳ ಬಗ್ಗೆ ಸಾಹಿತ್ಯ, ಭಾಷೆ, ಗಣಿತ, ವಿಜ್ಞಾನ, ಇತಿಹಾಸ, ಕಲೆ, ಪರಿಸರ ವಿಜ್ಞಾನ, ಭೂಗೋಳ ಇತ್ಯಾದಿ ಬೋಧನ ವಿಷಯಗಳಿಗೆ ಸಂಬಂಧಿಸಿದ ಕೃತಿಗಳು.

### *02. ವಿದ್ಯಾರ್ಥಿಗಳಿಗಾಗಿ:*

- ಪ್ರೌಢ ಶಾಲಾ ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿರುವ ಸಾಹಿತ್ಯ.
- ರಾಷ್ಟ್ರ ಮತ್ತು ರಾಜ್ಯದ ಇತಿಹಾಸ, ಮತ್ತು ಭೌಗೋಳಿಕ ಅಂಶಗಳನ್ನು ವಿವರಿಸುವ ಕೃತಿಗಳು.
- ಪ್ರಖ್ಯಾತ ವಿಜ್ಞಾನಿಗಳ ಸಾಧನೆ ಮತ್ತು ಜೀವನ ಚರಿತ್ರೆಯನ್ನೊಳಗೊಂಡ ಕೃತಿಗಳು.
- ಭಾಷೆ,ಗಣಿತ,ವಿಜ್ಞಾನ,ಕ್ರೀಡೆ,ಲಲಿತ ಸಾಹಿತ್ಯ,ರಂಗಕಲೆ,ತೋಟಗಾರಿಕೆ, ಕೃಷಿ, ಆರೋಗ್ಯ, ಪ್ರಥಮ ಚಿಕಿತ್ಸೆ, ಯೋಗಾಭ್ಯಾಸ, ನೀತಿ ಶಿಕ್ಷಣ, ಚಿತ್ರಕಲೆ ಮತ್ತು ಪೇಂಟಿಂಗ್, ಮುಂತಾದ ವಿಷಯಗಳ ಕೃತಿಗಳು.
- ವಿದ್ಯಾರ್ಥಿಗಳಲ್ಲಿ ಓದುವ ಕೌಶಲ್ಯಮತ್ತು ವೈಜ್ಞಾನಿಕ ಮನೋಭಾವವನ್ನು ಹೆಚ್ಚಿಸುವಂತಹ ಕುತೂಹಲಕಾರಿ ಕೃತಿಗಳು.
- ವಿದ್ಯಾರ್ಥಿಗಳು ಸ್ವತಂತ್ರವಾಗಿ ವಿಜ್ಞಾನ ಪ್ರಯೋಗಗಳನ್ನು ಮಾಡಲು ಮಾರ್ಗದರ್ಶನ ನೀಡುವ ಬಗ್ಗೆ ಪೂರಕವಾದ ಕೃತಿಗಳು.
- ಪೌರಾಣಿಕ ವ್ಯಕ್ತಿಗಳ ಪರಿಚಯ, ರಾಷ್ಟ್ರ ಧ್ವಜದ ಮಹತ್ವ, ರಾಷ್ಟ್ರೀಯ ಭಾವೈಕ್ಯ, ಜಾತ್ಯಾತೀತ ತತ್ವಗಳನ್ನು ಬೋಧಿಸುವ ಕೃತಿಗಳು.

- ವಿದ್ಯಾರ್ಥಿಗಳಲ್ಲಿ ಸಾಮಾನ್ಯ ಜ್ಞಾನವನ್ನು ಹೆಚ್ಚಿಸುವಂತಹ ಒಗಟು, ಗಾದೆಗಳು, ಸುಭಾಷಿತ, ಪದಬಂಧಗಳನ್ನೊಳಗೊಂಡ ಕೃತಿಗಳು.
- ಪ್ರೌಢ ಶಾಲಾ ವಿದ್ಯಾರ್ಥಿಗಳ ಇಂಗ್ಲಿಷ್ ಕಲಿಕೆಯನ್ನು ಉತ್ತಮಪಡಿಸಲು ಪೂರಕವಾದ ರೀಡಿಂಗ್ ಕಾರ್ಡ್, ಪುಸ್ತಕಗಳು ಇತ್ಯಾದಿ.
- ವಿದ್ಯಾರ್ಥಿಗಳಲ್ಲಿ ಬರೆಯುವ ಹವ್ಯಾಸವನ್ನು ಬೆಳೆಸುವಂತಹ ಪತ್ರ ಲೇಖನಗಳು, ಪ್ರಬಂಧಗಳು, ಜೀವನ ಚರಿತ್ರೆಗಳು ಇತ್ಯಾದಿ.

*03.ಆಕರ ಗ್ರಂಥಗಳು:*

- ಪ್ರೌಢ ಶಾಲಾ ಶಿಕ್ಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಉಪಯುಕ್ತವಾದ ಆಕರ ಗ್ರಂಥಗಳು.
- ಕನ್ನಡ-ಇಂಗ್ಲಿಷ್, ಕನ್ನಡ-ಕನ್ನಡ, ಇಂಗ್ಲಿಷ್-ಕನ್ನಡ, ಇಂಗ್ಲಿಷ್-ಇಂಗ್ಲಿಷ್-ಕನ್ನಡ, ಹಿಂದೀ-ಕನ್ನಡ, ಕನ್ನಡ-ಹಿಂದೀ ನಿಘಂಟುಗಳು.
- ವಿಶ್ವಕೋಶಗಳು, ಸಾಮಾನ್ಯ ಜ್ಞಾನಕ್ಕೆ ಸಂಬಂಧಿಸಿದ ಪುಸ್ತಕಗಳು, ಮಹಾನ್ ಲೇಖಕರ ಕೃತಿಗಳು.
- ಪ್ರಪಂಚ, ರಾಷ್ಟ್ರ, ರಾಜ್ಯ ಮತ್ತು ಜಿಲ್ಲೆಗಳ ಭೌಗೋಳಿಕ, ಪ್ರಾಕೃತಿಕ ಮತ್ತು ರಾಜಕೀಯ ವಿಷಯವನ್ನೊಳಗೊಂಡ ಅಟ್ಲಾಸ್‌ಗಳು.

## ➢ *ಲೇಖಕರು ಮತ್ತು ಪ್ರಕಾಶಕರು ಗಮನಿಸಬೇಕಾದ ಅಂಶಗಳು:*

01. ಅರ್ಜಿಗಳನ್ನು ನಿಗದಿತ ನಮೂನೆಯಲ್ಲಿಯೇ ಸಲ್ಲಿಸಬೇಕು. ಅರ್ಜಿ ನಮೂನೆಯನ್ನು ಮಾರ್ಗಸೂಚಿಯೊಂದಿಗೆ ಲಗತ್ತಿಸಲಾಗಿದೆ. ಆಯ್ಕೆಗೆ ಸಲ್ಲಿಸಲಾಗುವ ಪುಸ್ತಕ ಮತ್ತು ಸರಬರಾಜುಗೊಳ್ಳುವ ಪುಸ್ತಕಗಳ ಗುಣಮಟ್ಟವು ಎಲ್ಲಾ ರೀತಿಯಿಂದ ಒಂದೇ ತೆರನಾಗಿರಬೇಕು.

02. ನಿಗದಿತ ನಮೂನೆಯಲ್ಲಿ ಎಲ್ಲಾ ವಿವರಗಳನ್ನು ಸ್ಪಷ್ಟವಾಗಿ ನಮೂದಿಸಿ, ಪ್ರತಿಯೊಂದು ಪುಸ್ತಕದ ಜೊತೆಗೆ ಒಂದು ನಮೂನೆಯನ್ನು ಸಲ್ಲಿಸತಕ್ಕದ್ದು. ಪುಸ್ತಕದಲ್ಲಿ **ದರವನ್ನು ಸ್ಪಷ್ಟವಾಗಿ ಮುದ್ರಿಸಿರಬೇಕು. ಸ್ಟಿಕ್ಕರ್ ಅಂಟಿಸಿದ, ತಿದ್ದಿದ ಮುಂತಾದ ಪುಸ್ತಕಗಳನ್ನು ಪರಿಗಣಿಸಲಾಗುವುದಿಲ್ಲ**. ಆಯ್ಕೆಗೆ ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ.

03. ಖರೀದಿಸಲಾಗುವ ಪ್ರತಿಯೊಂದು ಪುಸ್ತಕಕ್ಕೆ ನಿಯಮಾನುಸಾರ ಕನಿಷ್ಠ ಶೇಕಡಾ 15 ಸೋಡಿಯನ್ನು ಕಡ್ಡಾಯವಾಗಿ ನೀಡಬೇಕಾಗುತ್ತದೆ. ಇದಕ್ಕಿಂತ ಅಧಿಕವಾಗಿ ಸೋಡಿಯನ್ನು ನೀಡುವ ಲೇಖಕರು ಮತ್ತು ಪ್ರಕಾಶಕರು ತಾವು ನೀಡಲು ಬಯಸುವ ಹೆಚ್ಚುವರಿ ಸೋಡಿಯ ಶೇಕಡಾ ದರವನ್ನು ಸ್ಪಷ್ಟವಾಗಿ ಅರ್ಜಿಯಲ್ಲಿ ನಮೂದಿಸಬೇಕು.

04. ಪುಸ್ತಕಗಳನ್ನು **ದಿನಾಂಕ:07.02.2009ರ ಸಂಜೆ 5-30 ಗಂಟೆಯೊಳಗೆ ಜಂಟಿ ನಿರ್ದೇಶಕರು [ಆಡಳಿತ] ಮತ್ತು ಸದಸ್ಯ ಕಾರ್ಯದರ್ಶಿಗಳು,ಪುಸ್ತಕ ಆಯ್ಕೆ ಸಮಿತಿ,ರಾಜ್ಯ ಶಿಕ್ಷಣ ಸಂಪನ್ಮೂಲ ಕೇಂದ್ರ,[ಸೆರಿಕ್ ಗ್ರಂಥಾಲಯ] ಶೇಷಾದ್ರಿ ಪುರಂ [,ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು] ಬೆಂಗಳೂರು-560020 [ದೂರವಾಣಿ ಸಂಖ್ಯೆ:23464102]**ಇವರ ವಿಳಾಸಕ್ಕೆ ತಲುಪುವಂತೆ ಸಲ್ಲಿಸಬೇಕು. ನಂತರ ಸಲ್ಲಿಸಲಾಗುವ ಪುಸ್ತಕಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ.

## ➢ *ಪುಸ್ತಕಗಳ ಆಯ್ಕೆಯಲ್ಲಿ ಆಯ್ಕೆ ಸಮಿತಿಯು ಅನುಸರಿಸಲಾಗುವ ಕ್ರಮಗಳು:*

*01.* ಸರ್ಕಾರಿ ಪ್ರೌಢ ಶಾಲಾ ಗ್ರಂಥ ಭಂಡಾರಕ್ಕೆ ವಿದ್ಯಾರ್ಥಿಗಳ ಉಪಯೋಗಕ್ಕಾಗಿ ಪುಸ್ತಕಗಳನ್ನು ಆಯ್ಕೆ ಮಾಡುವಾಗ ಪುಸ್ತಕದ ಗಾತ್ರ,ಮುದ್ರಣಕ್ಕೆ ಉಪಯೋಗಿಸಿರುವ ಕಾಗದ,ವಿನ್ಯಾಸ,ಪುಸ್ತಕ ಒಳಗೊಂಡಿರುವ ಚಿತ್ರಗಳು, ಮುದ್ರಣಕ್ಕೆ ಬಳಸಲಾಗಿರುವ ಅಕ್ಷರ ಗಾತ್ರ ಮುಂತಾದ ವಿವರಗಳನ್ನು ವಿಶೇಷವಾಗಿ ಗಮನಿಸಲಾಗುವುದು.

*02.* ಪ್ರೌಢ ಶಾಲೆಗಳಿಗೆ ಉತ್ತಮವಾದ ಪುಸ್ತಕಗಳನ್ನು ಆಯ್ಕೆ ಮಾಡಲು ರಾಜ್ಯದ ಎಲ್ಲಾ ಭಾಗದ ಲೇಖಕರು ಮತ್ತು ಪ್ರಕಾಶಕರಿಂದ ಮನವಿ ಮತ್ತು ಪುಸ್ತಕಗಳ ಪ್ರತಿಗಳನ್ನು ಪಡೆಯಲು ಸಾರ್ವಜನಿಕ ಶಿಕ್ಷಣ ಇಲಾಖೆಯು ಪತ್ರಿಕೆಗಳು ಮತ್ತು ಇತರೆ ಮಾಧ್ಯಮಗಳ ಮೂಲಕ ಪ್ರಕಟಣೆ ನೀಡುತ್ತದೆ.

*03.* ಆಯ್ಕೆಗೆ ಸಲ್ಲಿಸಲಾದ ಪುಸ್ತಕಗಳನ್ನು ಪರಿಣಿತರು/ವಿಷಯ ತಜ್ಞರು/ಶಿಕ್ಷಕರು ಇವರುಗಳಿಂದ ಪರಿಶೀಲನೆ ಮಾಡಿಸಿ ಆಯ್ಕೆ ಮಾಡಲಾಗುತ್ತದೆ.

*04.* ಪುಸ್ತಕಗಳನ್ನು ಆಯ್ಕೆ ಮಾಡುವಾಗ ರಾಜ್ಯದ ಎಲ್ಲಾ ಭಾಗದ ಲೇಖಕರು, ಪ್ರಕಾಶಕರನ್ನು ಗಮನದಲ್ಲಿಟ್ಟುಕೊಳ್ಳಲಾಗುತ್ತದೆ.

*05.* ಪುಸ್ತಕದ ಆಯ್ಕೆ ಸಂದರ್ಭದಲ್ಲಿ ಲೇಖಕರು, ಪ್ರಕಾಶಕರು ನೀಡುವ ಸೋಡಿಯನ್ನು ಮತ್ತು ಪುಸ್ತಕದ ಗುಣಮಟ್ಟವನ್ನು ಸಹ ವಿಶೇಷವಾಗಿ ಗಮನಿಸಲಾಗುತ್ತದೆ.

➢ **ಆಯ್ಕೆಯಾದ ಪುಸ್ತಕಗಳ ಖರೀದಿ ಮತ್ತು ಪಾವತಿಗಳಿಗೆ ಅನುಸರಿಸುವ ಕ್ರಮಗಳು:**

*01.* ಆಯ್ಕೆಯಾದ ಪುಸ್ತಕಗಳ ಸರಬರಾಜಿಸುವ ಬಗ್ಗೆ ಲೇಖಕರು ಮತ್ತು ಪ್ರಕಾಶಕರಿಗೆ ಸರಬರಾಜು ಆದೇಶ ನೀಡಲಾಗುವುದು .

*02.* ಲೇಖಕರು ಮತ್ತು ಪ್ರಕಾಶಕರು ಆದೇಶ ಪಡೆದ 10 **ದಿನಗಳೊಳಗಾಗಿ** ಪುಸ್ತಕಗಳನ್ನು **ರಾಜ್ಯ ಶಿಕ್ಷಣ ಸಂಪನ್ಮೂಲ ಕೇಂದ್ರ,[ಸೆರಿಕ್ ಗ್ರಂಥಾಲಯ] ಶೇಷಾದ್ರಿ ಪುರಂ [,ಶೇಷಾದ್ರಿ ಪುರಂ ಪೋಲೀಸ್ ಠಾಣೆ ಎದುರು]** ***ಬೆಂಗಳೂರು-560020 [ದೂರವಾಣಿ ಸಂಖ್ಯೆ:23464102]*** ಇವರ ವಿಳಾಸಕ್ಕೆ ಸರಬರಾಜು ಮಾಡುವುದು.

*03.* ಸರಬರಾಜಾದ ಪುಸ್ತಕಗಳ ಹಣ ಪಾವತಿಯನ್ನು ಮುಂದಿನ 60 ದಿನಗಳೊಳಗಾಗಿ ಪಾವತಿ ಮಾಡಲಾಗುವುದು.

*04.* ಲೇಖಕರು ಮತ್ತು ಪ್ರಕಾಶಕರುಗಳಿಗೆ ನೀಡುವ ಆದೇಶದ ಒಟ್ಟು ಮೌಲ್ಯ *ರೂ. 50,000/-* ಮೀರಿದಲ್ಲಿ ***ಶೇಕಡ 10ರಷ್ಟು*** ಮೊತ್ತದ ***ಫರ್‌ಫಾರ್ಮೆನ್ಸ್ ಸೆಕ್ಯೂರಿಟಿಯನ್ನು*** ರಾಷ್ಟ್ರೀಕೃತ ಬ್ಯಾಂಕೊಂದರ ಬೇಡಿಕೆ ಹುಂಡಿ ಮುಖೇನ ***ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು*** ಇವರ ಹೆಸರಿನಲ್ಲಿ ನೀಡಬೇಕಾಗುತ್ತದೆ.

*05.* ಆದೇಶ ಸ್ವೀಕರಿಸಿದ 7 **ದಿವಸಗಳೊಳಗಾಗಿ** ಇಲಾಖೆಗೆ **ಒಪ್ಪಂದದ ಮುಚ್ಚಳಿಕೆ** ನೀಡಬೇಕಾಗಿರುತ್ತದೆ.

*06.* ಕಳಪೆ ಗುಣಮಟ್ಟದ, ಹಳೆಯ, ಹರಿದುಹೋದ, ಮುದ್ರಣ ದೋಷದ, ಆಯ್ಕೆಯಾದ ಪುಸ್ತಕಗಳ ಬದಲಾಗಿ ಬೇರೆ ಪುಸ್ತಕದ ಸರಬರಾಜು ಇತ್ಯಾದಿ ಕಾರಣಗಳಿಗೆ ಸಂಬಂಧಿಸಿದ ಪುಸ್ತಕಗಳನ್ನು ತಿರಸ್ಕರಿಸುವ ಅಧಿಕಾರವು ಇಲಾಖೆಗೆ ಇರುತ್ತದೆ. ಇಂಥ ಪ್ರಕರಣಗಳಿಗೆ ಸಂಬಂಧಿಸಿದಂತೆ ತಿರಸ್ಕರಿಸಲ್ಪಟ್ಟ ಪುಸ್ತಕಗಳ ಒಟ್ಟು ಮೌಲ್ಯವನ್ನು ಫರ್‌ಫಾರ್ಮೆನ್ಸ್ ಸೆಕ್ಯೂರಿಟಿಯಿಂದ ಕಟಾಯಿಸಲಾಗುವುದು.

*07.* ಇಲಾಖೆಯು ನೀಡಿದ ವಿವರಣೆಯಂತೆ ಕಾರ್ಯ ನಿರ್ವಹಿಸದಿದ್ದಲ್ಲಿ, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ,ಬೆಂಗಳೂರು,ಇವರು ಆದೇಶವನ್ನು ರದ್ದುಪಡಿಸುವ ವಿವೇಚನಾಧಿಕಾರವನ್ನು ಹೊಂದಿರುತ್ತಾರೆ.

*08.* ಪುಸ್ತಕ ಸರಬರಾಜಿಗೆ ಅಂತಿಮ ಆದೇಶ ನೀಡುವ ಮುನ್ನ ಯಾವುದೇ ಸಮಯದಲ್ಲಿ ಜಿಲ್ಲಾವಾರು ಶಾಲೆಗಳ ಸಂಖ್ಯೆಯನ್ನು ಹೆಚ್ಚಿಸುವ/ಕಡಿಮೆ ಮಾಡುವ ವಿವೇಚನಾಧಿಕಾರವನ್ನು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರು ಹೊಂದಿರುತ್ತಾರೆ.

ಈ ಎಲ್ಲಾ ವಿವರಗಳು ಸಾರ್ವಜನಿಕ ಶಿಕ್ಷಣ ಇಲಾಖೆಯ **"ವೆಬ್ ಸೈಟ್‌ನಲ್ಲಿ" ಲಭ್ಯವಿದೆ.**

## ವೆಬ್ ಸೈಟ್ : http://schooleducation.kar.nic.in

-- ಸಹಿ/ --
***ಸದಸ್ಯ ಕಾರ್ಯದರ್ಶಿಗಳು***
ಪುಸ್ತಕ ಆಯ್ಕೆ ಸಮಿತಿ ಹಾಗೂ
***ಜಂಟಿ ನಿರ್ದೇಶಕರು [ಆಡಳಿತ]***
ಸಾರ್ವಜನಿಕ ಶಿಕ್ಷಣ ಇಲಾಖೆ

-- ಸಹಿ/--
**ಅಧ್ಯಕ್ಷರು**
ಪುಸ್ತಕ ಆಯ್ಕೆ ಸಮಿತಿ
ಸಾರ್ವಜನಿಕ ಶಿಕ್ಷಣ ಇಲಾಖೆ

ಕರ್ನಾಟಕ ಸರ್ಕಾರ

**ಸಾರ್ವಜನಿಕ ಶಿಕ್ಷಣ ಇಲಾಖೆ**

**ಆಯುಕ್ತರ ಕಛೇರಿ,ಹೊಸ ಸಾರ್ವಜನಿಕ ಕಛೇರಿಗಳು, ನೃಪತುಂಗ ರಸ್ತೆ, ಬೆಂಗಳೂರು**

ಸಂಖ್ಯೆ:ಸಿ5[5]ಸಗಟು ಖರೀದಿ:02:2008–09

ದಿನಾಂಕ:23.01.2009

## ಪುಸ್ತಕಗಳನ್ನು ಸಲ್ಲಿಸುವ ನಮೂನೆ

| ಕ್ರ.ಸಂ | ವಿವರ | | | |
|---|---|---|---|---|
| 01 | ಪುಸ್ತಕದ ಹೆಸರು | | | |
| 02 | ಭಾಷೆ | ಕನ್ನಡ ☐ ಇಂಗ್ಲೀಷ್ ☐ ಹಿಂದೀ ☐ | | |
| 03 | ಲೇಖಕರ ಹೆಸರು<br>ಮತ್ತು ವಿಳಾಸ.<br>ದೂರವಾಣಿ ಸಂಖ್ಯೆ<br>ಮೊಬೈಲ್: | | | |
| 3ಎ | ಅನುವಾದವಾಗಿದ್ದರೆ ಮೂಲ ಲೇಖಕರ ಹೆಸರು ಮತ್ತು ಅನುವಾದಕರ ಹೆಸರು | | | |
| 04 | ಪ್ರಕಾಶಕರ ಹೆಸರು ಮತ್ತು ವಿಳಾಸ [ಕೆ.ಎಸ್.ಟಿ/ಸಿ.ಎಸ್.ಟಿ/ವ್ಯಾಟ್ ಸಂಖ್ಯೆ ಮತ್ತು ದೂರವಾಣಿ ಸಂಖ್ಯೆ ನಮೂದಿಸುವುದು] | | | |
| 4ಎ | ಲೇಖಕ/ ಪ್ರಕಾಶಕರ ಹೆಸರು ಮತ್ತು ವಿಳಾಸ | | | |
| 4ಬಿ | ಪ್ರಕಾಶಕರ ಹೆಸರು ಮತ್ತು ವಿಳಾಸ | | | |
| 05 | ***ಶೀರ್ಷಿಕೆಗಳ ವಿವರ*** | | | |
| | ಪುಸ್ತಕದ ಬೆಲೆ | | | |
| | ಪ್ರಕಟಗೊಂಡಿರುವ ವರ್ಷ | | | |
| | ಆಕಾರ ಮತ್ತು ಒಟ್ಟು ಪುಟಗಳ ಸಂಖ್ಯೆ | | | |
| | ***ಮುದ್ರಿಸಿದ ವರ್ಣ:*** ಮುಖ ಪುಟ | ಏಕ ವರ್ಣ/ದ್ವಿವರ್ಣ/ಬಹುವರ್ಣ | | |
| | ಒಳ ಪುಟ | ಏಕ ವರ್ಣ/ದ್ವಿವರ್ಣ/ಬಹುವರ್ಣ | | |
| | ಬಳಸಿದ ಕಾಗದದ ಗುಣ ಮಟ್ಟ[ಜಿ.ಎಸ್.ಎಂ.] | | | |
| 06 | ಸೋಡಿ | ಕಡ್ಡಾಯವಾಗಿ ಶೇ.15 | ಹೆಚ್ಚುವರಿಯಾಗಿ ನೀಡುವ ಸೋಡಿ ಶೇಕಡಾ | ಒಟ್ಟು ಶೇಕಡಾ ಸೋಡಿ [ಕಡ್ಡಾಯವೂ ಸೇರಿದಂತೆ |
| | | [1] | [2] | [1+2]= [3] |
| | | | | |
| 07 | ಇತರೆ | | | |

**ವಿ.ಸೂ: ಪ್ರತಿ ಶೀರ್ಷಿಕೆಗೆ[ಪುಸ್ತಕ] ಸಂಬಂಧಿಸಿದಂತೆ ಪ್ರತ್ಯೇಕ ನಮೂನೆಯಲ್ಲಿ ವಿವರ ಸಲ್ಲಿಸುವುದು**

ಸ್ಥಳ:

ದಿನಾಂಕ:

**ಪ್ರಕಾಶಕರು/ಲೇಖಕರು**

**ದೂರವಾಣಿ/ಮೊಬೈಲ್ ಸಂಖ್ಯೆ:**